# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

**ಸಿ.ಸಿ. ಸಂಖ್ಯೆ: 1559/2023**

**ಪಿರ್ಯಾದಿ** : ಪ್ರಶಾಂತ್.ಸಿ ಯಾನೆ ಶಾನ್ ಗೌಡ,
ಬಿನ್ ಚಂದ್ರೇಗೌಡ,
ವಯಸ್ಸು ಸುಮಾರು 41 ವರ್ಷ,
ವಾಸ: ಹಂಡುಗುಳಿ ಗ್ರಾಮ,
ಜೋಗಣ್ಣನಕೆರೆ ಅಂಚೆ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

**ವಿರುದ್ಧ**

**ಆರೋಪಿ** : ಶ್ರೀ ಉದಯಕುಮಾರ್.ಹೆಚ್.ಬಿ,
ಬಿನ್ ಹೆಚ್.ಬಿ.ಬೈರಯ್ಯ,
ವಯಸ್ಸು ಸುಮಾರು 40 ವರ್ಷ,
ವಾಸ: ಹೊಸಮನೆ ಬಡಾವಣೆ ಕಾಲೋನಿ,
ಚಿನ್ನಿಗ ಗ್ರಾಮ, ಜನ್ನಾಪುರ ಅಂಚೆ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

## ಆಪಾದನೆಯ ಸಾರಾಂಶ

ನಾನು ಶ್ರೀ ಸಚಿನ್.ಡಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ:-

ಆರೋಪಿಯಾದ ನೀವು ಪಿರ್ಯಾದುದಾರರನ್ನು ಸಂಪರ್ಕಿಸಿ, ಒಟ್ಟು ರೂ.4,00,000/- ಮೌಲ್ಯದ 8 ಟನ್ ನಷ್ಟು ಹಸಿ ಅಡಿಕೆಯನ್ನು ಖರೀದಿಸಿದ್ದು, ಇದರ ಹಣವನ್ನು ಪಾವತಿ ಮಾಡುವ ಸಲುವಾಗಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್, ಜನ್ನಾಪುರ ಶಾಖೆಯ ಚೆಕ್ ಸಂಖ್ಯೆ:001802, ದಿನಾಂಕ 04.09.2023, ರೂ.4,00,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಐಸಿಐಸಿಐ ಬ್ಯಾಂಕ್, ಮೂಡಿಗೆರೆ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲ ***(Funds Insufficient)*** ಎಂದು

ಹಿಂಬರಹ ನೀಡಿದ್ದು ಇರುತ್ತದೆ. ಕಾರಣ, ಫಿರ್ಯಾದಿಯು ದಿನಾಂಕ 15.09.2023 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರ: 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರ:

ಪ್ರ: 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:

*(ಆರೋಪಿಗೆ ದಿನಾಂಕ 16.01.2024 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ)*

Sd/-

ಮೂಡಿಗೆರೆ
ದಿನಾಂಕ: 16.01.2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.